**ದಿನಾಂಕಃ 17.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 1 ನೇ ಪ್ರತಿ**ವಾದಿ ಪರ** ಶ್ರೀ ಪಿ ಎಸ್ **ವಕೀಲರಿಂದಃ**

ನನ್ನ ತಾತ ಗೂಳಯ್ಯರವರಿಗೆ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ವಡೆಯಾಂಡಳ್ಳಿ ಗ್ರಾಮದ ಸರ್ವೆ ನಂಬರ್ 295 ರಲ್ಲಿ ನನ್ನ ತಾತ ಗೂಳಯ್ಯರವರ ಹೆಸರಿನಲ್ಲಿ 10 ಗುಂಟೆ ವಿಸ್ತೀರ್ಣದ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಯ್ಯ, ಮಹದೇವ, ಮಲ್ಲಯ್ಯ, ಬೆಟ್ಟಯ್ಯ ಮತ್ತು ಮರಿನಂಜಯ್ಯರವರು ನನ್ನ ತಾತ ಗೂಳಯ್ಯರವರ ಸಹೋದರರು ಎಂದರೆ ನನಗೆ ಗೊತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ನನ್ನ ತಾತ ಗೂಳಯ್ಯರವರಿಗೆ 3 ಜನ ಸಹೋದರರು ಇದ್ದರು. ಅವರೆಂದರೆ ಮರಿನಂಜಯ್ಯ, ಬಟ್ಟಯ್ಯ, ಕೆಂಪಯ್ಯ. ಸರ್ವೆ ನಂಬರ್ 295 ರ ಆಸ್ತಿಗೆ ಸಂಬಂಧ ಇದೆಯೇ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಡೆಯಾಂಡಳ್ಳಿ ಗ್ರಾಮದ ಸರ್ವೆ ನಂಬರ್ 173 ರಲ್ಲಿ ನನ್ನ ತಾತ ಗೂಳಯ್ಯರವರ ಹೆಸರಿನಲ್ಲಿ 4 ಗುಂಟೆ ವಿಸ್ತೀರ್ಣದ ಇನಾಮು ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವಡೆಯಾಂಡಳ್ಳಿ ಗ್ರಾಮದ ಸರ್ವೆ ನಂಬರ್ 10 ರಲ್ಲಿ ನನ್ನ ತಾತ ಗೂಳಯ್ಯರವರ ಹೆಸರಿನಲ್ಲಿ 3 ಗುಂಟೆ ವಿಸ್ತೀರ್ಣದ ಅಜ್ಜುಪಾಲು ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಇರುವುದು ನನಗೆ ತಿಳಿದಿದ್ದರೂ ಸಹ ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ